# ಮಾಲ್ಗುಡಿ ಕರ್ತನ ಮನೆಯೇ ಸ್ಮಾರಕ



**ಪ್ರಖ್ಯಾತ ಇಂಗ್ಲಿಷ್ ಲೇಖಕರಾಗಿ ಬೆಳೆದ ನಾರಾಯಣ್ ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಇಂಗ್ಲಿಷ್‌ನಲ್ಲೇ ಫೇಲ್ ಆಗಿದ್ದರಂತೆ ! ಅವರ ಮನೆಯಲ್ಲೀಗ ಅವರೇ ಬರೆದ ಎಲ್ಲ ಇಂಗ್ಲಿಷ್ ಕಾದಂಬರಿಗಳೂ ಗಮನ ಸೆಳೆಯುತ್ತಿವೆ.**

**■ ಎಂ.ಎಸ್. ರಘುನಾಥ್**

'ಇದು ನನ್ನ ಶಿಶು. ನಾನು ಅದನ್ನು ಬೆಳೆಸಿದೆ, ಬೆಳೆಯುವುದನ್ನು ನೋಡಿದೆ. ಅದನ್ನು ಪ್ರೀತಿಸಿದೆ. ಅದನ್ನು ಕಡಿಯಬೇಡಿ.'

– ಈ ಮಾತುಗಳನ್ನು ಖ್ಯಾತ ಭಾರತೀಯ ಆಂಗ್ಲ ಲೇಖಕ ಆರ್.ಕೆ ನಾರಾಯಣ್ ಅವರು ತಾವು ಕಟ್ಟಿಸಿ ಬದುಕಿದ್ದ ಮನೆಯ ಬಗ್ಗೆ ಹೇಳಿದರೇನೋ ಎಂದು ಭಾಸವಾಗುತ್ತದೆ. ಕಾರಣ ಈ ಮಾತುಗಳ ಫಲಕವೊಂದು ಈಗ ಅವರ ನೆನಪಿಗಾಗಿ ನಿರ್ಮಿಸಲಾಗಿರುವ ಸ್ಮಾರಕದಲ್ಲಿ ಎದ್ದು ಕಾಣಿಸುತ್ತಿದೆ. ಅವರು ಐದು ದಶಕಗಳಿಗೂ ಹೆಚ್ಚು ಕಾಲ ಬದುಕಿ, ಬರಹಗಳನ್ನು ಮಾಡಿದ ಮೈಸೂರಿನ ಯಾದವಗಿರಿ ವಿವೇಕಾನಂದ ರಸ್ತೆಯ ಮನೆಯನ್ನು ಈಗ ಅವರ ಸ್ಮಾರಕವನ್ನಾಗಿ ಪರಿವರ್ತಿಸಲಾಗಿದೆ. ಆರ್. ಕೆ ನಾರಾಯಣ್ ಅವರು ಮೈಸೂರಿನಲ್ಲಿ ಇದ್ದರೂ ಕನ್ನಡದವರಾಗಲಿಲ್ಲ ಎಂಬ ಕಾರಣವನ್ನೊಡ್ಡಿ ಕನ್ನಡದ ಹಲವು ಹಿರಿಯ ಸಾಹಿತಿಗಳು ವಿರೋಧ ಮಾಡಿದ್ದರ ನಡುವೆಯೂ, ನಾರಾಯಣ್ ಅವರ ಸ್ಮಾರಕ ನಿರ್ಮಾಣವಾಗಿದೆ.

ಕಳೆದ ಶತಮಾನದ ಭಾರತೀಯ ಆಂಗ್ಲ ತ್ರಿವಳಿ ಲೇಖಕರಲ್ಲಿ ಒಬ್ಬರಾದ (ಇನ್ನಿಬ್ಬರು, ಮುಲ್ಕರಾಜ್ ಆನಂದ್ ಹಾಗೂ ನಮ್ಮವರೇ ಆದ ರಾಜಾರಾವ್) ಆರ್.ಕೆ. ನಾರಾಯಣ್ ಅದ್ವಿತೀಯ ಇಂಗ್ಲಿಷ್ ಲೇಖಕರು. ಸುಮಾರು 20 ಕಾದಂಬರಿಗಳು ಹಾಗೂ ಅನೇಕ ಕಥೆಗಳನ್ನು ಭಾರತೀಯ ಜೀವನದ ಬಗ್ಗೆಯೇ ಇಂಗ್ಲೀಷ್‌ನಲ್ಲಿ ಬರೆದು ಪ್ರಖ್ಯಾತರಾದವರು. ಅವರದ್ದು ಅದ್ವಿತೀಯವಾದ ಇಂಗ್ಲಿಷ್ ಶೈಲಿ ಎಂದು ಇಂಗ್ಲಿಷ್ ಭಾಷಾಶಾಸ್ತ್ರಜ್ಞರೇ ಪ್ರಶಂಸಿಸಿದ್ದಾರೆ. ಮಾಲ್ಗುಡಿ ಎಂಬ ಸ್ಥಳವನ್ನು ತಮ್ಮ ಬರಹಗಳಲ್ಲಿ ಸೃಷ್ಟಿಸಿ, ದಕ್ಷಿಣ ಭಾರತದ ಸ್ಥಳವೊಂದನ್ನು ತಮ್ಮ ಪುಸ್ತಕಗಳ ಮೂಲಕ ತೃತೀಯ ಜಗತ್ತಿನಲ್ಲಿ ಸ್ಮರಣೀಯವಾಗಿಸಿದ ನಾರಾಯಣ್ ನಿಜಕ್ಕೂ ಓರ್ವ ಅತ್ಯುತ್ತಮ ಲೇಖಕ. ಭಾರತೀಯ ಇಂಗ್ಲಿಷ್ ಓದುಗರ ವಲಯವೊಂದನ್ನು ಸೃಷ್ಟಿಸಿದವರು. ಭಾರತೀಯ ಆಂಗ್ಲ ಸಾಹಿತ್ಯದಲ್ಲಿ ಮನೆ ಮಾತಾದವರು.

ಪ್ರಖ್ಯಾತ ಇಂಗ್ಲಿಷ್ ಲೇಖಕರಾಗಿ ಬೆಳೆದ ನಾರಾಯಣ್ ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಇಂಗ್ಲಿಷ್‌ನಲ್ಲೇ ಫೇಲ್ ಆಗಿದ್ದರಂತೆ ! ಆದರೂ ಪದವಿ ನಂತರ ಯಾವುದೇ ವೃತ್ತಿಯನ್ನು ಕೈಗೊಳ್ಳದೆ ಗುಟ್ಟಾಗಿ ಕಥೆಯೊಂದನ್ನು ಬರೆದು ಕಳಿಸಿದರು. ಪತ್ರಿಕೆಯೊಂದರಲ್ಲಿ ಅದು ಅಚ್ಚಾಗಿದ್ದುದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತಂತೆ. ಅದರಿಂದ ಉತ್ತೇಜನಗೊಂಡು ಇಂಗ್ಲಿಷ್ ಲೇಖಕರಾಗಿಯೇ ಮುಂದುವರಿಯಲು ಮನಸ್ಸು ಮಾಡಿದ ವ್ಯಕ್ತಿ. ಒಂದಾದ ನಂತರ ಮತ್ತೊಂದು ಕಾದಂಬರಿ ಬರೆದು ಜನಪ್ರಿಯತೆಯ ತುದಿಗೆ ಏರಿದವರು.

ಅವರ ಕಾದಂಬರಿ, ಕಥೆಗಳು ಈಗಲೂ ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳಾಗಿ ಓದಲ್ಪಡುತ್ತಿವೆ. ನೂರಾರು ವಿಧ್ಯಾರ್ಥಿಗಳು ನಾರಾಯಣ್ ಅವರ ಸಾಹಿತ್ಯವನ್ನು ಕುರಿತು ಪಿ. ಹೆಚ್.ಡಿ ಪದವಿಯನ್ನು ಪಡೆದಿದ್ದಾರೆ. ಅವರ ಅದ್ವಿತೀಯ ಸಾಧನೆಯನ್ನು ಗುರುತಿಸಿ ದೆಹಲಿ, ಮೈಸೂರು, ವಿಶಾಖಪಟ್ಟಣ ಮೊದಲಾದ ಅನೇಕ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟು ಪದವಿಯನ್ನು ನೀಡಿವೆ. ಅವರ 'ಗೈಡ್' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿತು. ಈ ಕೃತಿ ಇಂಗ್ಲಿಷ್‌ನಲ್ಲಿ ಚಲನಚಿತ್ರವಾಗಿ ದೇಶದಾಚೆಯೂ ಪ್ರದರ್ಶನಗೊಂಡಿತು. ಅದರ ಹಿಂದಿ ಅವತರಣಿಕೆಯೂ ಸಾಕಷ್ಟು ಜನಪ್ರಿಯವಾಯಿತು.

ಕೇಂದ್ರ ಸರ್ಕಾರ ಅವರಿಗೆ 'ಪದ್ಮವಿಭೂಷಣ' ಪ್ರಶಸ್ತಿಯನ್ನು ನೀಡಿ ಭಾರತದ ಆಂಗ್ಲ ಸಾಹಿತ್ಯಕ್ಕೆ ಮನ್ನಣೆಯನ್ನು ನೀಡಿತು. ಅವರು ಐದು ದಶಕಗಳ ಕಾಲ ಮೈಸೂರಿನಲ್ಲೇ ನೆಲೆಸಿ ಅದನ್ನು ಬಹುವಾಗಿ ಪ್ರೀತಿಸಿದ್ದರು. ಚಿಕ್ಕ ವಯಸ್ಸಿನಲ್ಲೇ ಪತ್ನಿಯನ್ನು ಕಳೆದುಕೊಂಡ ನಾರಾಯಣ್ ವೃದ್ಧಾಪ್ಯದಲ್ಲಿ ಮಾತ್ರ ಚೆನ್ನೈನ ಮಗಳ ಮನೆಯಲ್ಲಿ ಇರಲು ಹೋದರು. ಅವರ ಪಾಲಿಗೆ ಮೈಸೂರು ಸರ್ವಸ್ವವಾಗಿತ್ತು.

ಅವರ ಕಾದಂಬರಿಗಳೆಂದರೆ ಮಧ್ಯಮ ವರ್ಗದ ಜೀವನದ ವಿಶ್ಲೇಷಣೆ. ಬಹು ದೊಡ್ಡ ಇಂಗ್ಲಿಷ್ ಓದುವ ವರ್ಗವನ್ನು ಕಾದಂಬರಿಗಳ ಮೂಲಕ ಸೃಷ್ಟಿಸಿದರು. 'ಬದುಕಿನ ಆಳವಾದ ಸಮಸ್ಯೆಗಳನ್ನು ಚಿತ್ರಿಸಲಿಲ್ಲ' ಎಂಬ ಟೀಕೆಗೆ ಒಳಗಾದರೂ ಕೂಡ, ಅವರ ಕಾದಂಬರಿಗಳಾದ, ಗೈಡ್, ರಾಜು ಮತ್ತು ಅವನ ಸ್ನೇಹಿತರು, ಮ್ಯಾನ್ ಈಟರ್ ಆಫ್ ಮಾಲ್ಗುಡಿ, ಫೈನಾನ್ಸಿಯಲ್ ಎಕ್ಸಪರ್ಟ್, ಅಸ್ಟ್ರಾಲಜರ್ಸ್ ಡೇ ಮತ್ತು ಇತರ ಕಥೆಗಳು, ಮೊದಲಾದವು ಅವರ ರಮ್ಯ ಕಥಾಲೋಕ ಹಾಗೂ ಸಾಮಾಜಿಕತೆಗೆ ಕನ್ನಡಿ ಹಿಡಿದಂತಿವೆ. ಅವರು ಸೃಷ್ಟಿಸಿದ ಪಾತ್ರಗಳು ರಾಜು, ಸ್ವಾಮಿ ಎಂಬ ಬಾಲಕ, ಮಾರ್ಗಯ್ಯ, ಜ್ಯೋತಿಷಿ, ಊರಾಚೆಯ ಆಲದ ಮರದ ಕೆಳಗೆ ಕಾಣಿಸುವ ಹರಟೆ ಹೊಡೆಯುವ ವ್ಯಕ್ತಿಗಳು ಮುಂತಾದವರನ್ನು ಓದುಗರು ಮರೆಯಲು ಸಾಧ್ಯವಿಲ್ಲ.

'ಮೈಸೂರಿನ ಇಂಗ್ಲಿಷ್ ಕಾದಂಬರಿಕಾರ' ಎಂದೇ ಖ್ಯಾತರಾದ